**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.2200/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಜಯಮ್ಮ | ಪ್ರಾಸಾ-1 |
| ಗಂಡನ ಹೆಸರು | : ರಾಜಶೆಟ್ಟಿ | ಚಾಸಾ-1 |
| ವಯಸ್ಸು | : 56 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ 19.08.2025 |
| ವಾಸಸ್ಥಳ | : ಹಿತ್ತಲಗಂಡಿ | |

**:ಮುಖ್ಯ ವಿಚಾರಣೆ ಪ್ರಾಙ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-2 ರವರು ನನ್ನ ಗಂಡ.

ಸಾಕ್ಷಿಯು ದಿ.09.02.2024 ರಂದು ನೀಡಿರುವ ದೂರಿನಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-1, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.12.02.2024 ರಂದು ಬರೆಯಲಾದ ಮಹಜರ್ ಪ್ರತಿಯಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ಪ್ರತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು 4 ಫೋಟೋದಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು.

ಸಾಕ್ಷಿಯು ತನ್ನ ಬಟ್ಟೆ ಹರಿದಿರುವುದಾಗಿ ನುಡಿದಿದ್ದು, ಮುಂದುವರೆದು ಕೇಳಲಾಗಿ, Paralysis stroke ಆದ ಕಾರಣ ಮತ್ತು ಇತರ ಅನಾರೋಗ್ಯದ ಕಾರಣ ಸಾಕ್ಷಿಗೆ ಪ್ರಕರಣದ ಕುರಿತು ತನಗೆ ಏನಾಗಿದೆ ಎಂದು ಹೇಳಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಮುಂದುವರೆದು ಈ ಪ್ರಕರಣದಕ್ಕೆ ಸಂಬಂಧಿಸಿದಂತೆ ಸಾಕ್ಷಿಯವರಿಂದ ಪಡೆಯಲು ಸಾಧ್ಯವಾಗಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಙ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಙ್ಞ್ಯಾ ಸ.ಸ.ಅ. ರವರಿಂದ:**

ನಾನು ಬಕ್ಕೀ ಗ್ರಾಮದ ರಸ್ತೆಯ ಬದಿಯಲ್ಲಿ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಪೆಟ್ಟಿಗೆ ಅಂಗಡಿಯ ಹಿಂಬದಿಯಲ್ಲಿ ಆರೋಪಿಯು ವಾಸಿಸುತ್ತಿರುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ಪೆಟ್ಟಿಗೆ ಅಂಗಡಿಯನ್ನು ಮುಂದುವರೆಸಲು ತೊಂದರೆಯನ್ನುಂಟು ಮಾಡುತ್ತಿದ್ದರು ಎಂದರೆ ಸರಿ. ದಿ.08.02.2024 ರಂದು ಆರೋಪಿಯು ನನ್ನ ಪೆಟ್ಟಿಗೆ ಅಂಗಡಿಯ ಒಳಗೆ ನುಗ್ಗಿ ಅದರೊಳಗಿದ್ದ ವಸ್ತುಗಳನ್ನು ಚಲ್ಲಾ ಪಿಲ್ಲಿ ಮಾಡಿ ನಾನು ಧರಿಸಿದ್ದ

ನೈಟಿಯನ್ನು ಹರಿದಿರುತ್ತಾರೆ ಎಂದರೆ ಸರಿ. ನಂತರ ಆರೋಪಿಯು ನನಗೂ ಮತ್ತು ಚಾಸಾ-2 ರವರಿಗೂ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಮತ್ತು ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ನಂತರ ಆರೋಪಿಯು ನನ್ನ ಅಂಗಡಿಯಲ್ಲಿದ್ದ ಸಿಲಿಂಡರ್ ಪೈಪ್ ನ್ನು ಕಿತ್ತು ಎಸೆದಿರುತ್ತಾರೆ, ಆರೋಪಿಯು ನಮ್ಮ ಅಂಗಡಿಯನ್ನು ಜೆ.ಸಿ.ಬಿ ಯಿಂದ ತೆಗೆಸುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿ.

ದಿ.09.02.2024 ರಂದು ಸದರಿ ವಿಷಯದ ಕುರಿತು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ದಿ.12.02.2024 ರಂದು ಸ.5.00 ರಿಂದ 6.00 ರ ಸಮಯದಲ್ಲಿ ಪೋಲಿಸರು ಸ್ಥಳ ಮಹಜರ್ ಗೆಂದು ಬಂದಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಧರಿಸಿದ್ದ ನೈಟಿ ಮತ್ತು ಒಂದು ಸಿಲಿಂಡರ್ ಪೈಪ್ ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನೈಟಿ ಮತ್ತು ಗ್ಯಾಸ್ ಪೈಪ್ ನ್ನು ನೋಡಿ ಆ ದಿನ ಪೋಲಿಸರು ವಶಪಡಿಸಿಕೊಂಡ ವಸ್ತುಗಳು ಎಂದು ಗುರುತಿಸಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-3 ಮತ್ತು 4 ರವರು ಮಹಜರ್ ಕ್ರಮಕ್ಕೆ ಸಹಿಯನ್ನು ಮಾಡಿರುತ್ತಾರೆ, ನಾನು ನನ್ನ ಹೆಬ್ಬೆಟಿನ ಗುರುತನ್ನು ಹಾಕಿರುತ್ತೇನೆ ನಂತರ ಒಂದು ಫೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ನನ್ನ ಅನಾರೋಗ್ಯದ ಕಾರಣ ಸರಿಯಾಗಿ ತಿಳಿಸಲು ಸಾಧ್ಯವಾಗುತ್ತಿಲ್ಲ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ.ಡಿ.ಎಸ್ ವಕೀಲರಿಂದಃ</u>**

20 ವರ್ಷದ ಹಿಂದೆ ನನಗೆ ಸ್ಟ್ರೋಕ್ ಆಗಿರುತ್ತದೆ. ನನ್ನ ಅನಾರೋಗ್ಯದ ಕುರಿತು ಪೋಲಿಸರಿಗೆ ತಿಳಿಸಿರುತ್ತೇನೆ. 10 ವರ್ಷದ ಹಿಂದೆ ನನಗೆ ಸರ್ಕಾರದಿಂದ ಪೆಟ್ಟಿಗೆಯನ್ನು ನೀಡಿರುತ್ತಾರೆ. 20 ವರ್ಷದ ಹಿಂದೆ ನಾನು ಮನೆಯ ಬಳಿ ನಡೆಸುತ್ತಿರುತ್ತೇನೆ. ನಾನು ಕಿತ್ತಲೆಗಂಡಿಯ ವಾಸಿಯಾಗಿರುತ್ತೇನೆ. ಕಿತ್ತಲೆಗಂಡಿ ಮತ್ತು ಬೆಟ್ಟಗೆರೆ, ಬಕ್ಕಿ ಗ್ರಾಮವು ಪ್ರತ್ಯೇಕವಾದ ಗ್ರಾಮಗಳು ಎಂದರೆ ಸರಿ. ಸದರಿ ಪೆಟ್ಟಿಗೆ ಅಂಗಡಿಯನ್ನು ನಡೆಸಲು ನಾನು ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ. ಜಗಳವಾಗುವ ಪೂರ್ವದಲ್ಲಿ ಆರೋಪಿಯು ನನ್ನ ವಿರುದ್ಧ ದೂರು ದಾಖಲಿಸಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಆರೋಪಿಯ ಮನೆಯ ಮುಂದೆ ಪೆಟ್ಟಿಗೆಯನ್ನು ಇಟ್ಟುಕೊಂಡು ಅವರಿಗೆ ತೊಂದರೆಯನ್ನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ವಿರುದ್ಧ ಪಂಚಾಯ್ತಿಗೆ ಮತ್ತು ಪೋಲಿಸ್ ಠಾಣೆಗೆ ದೂರು ನೀಡಿದ ನಂತರದಲ್ಲಿ ನಾನು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ದೂರನ್ನು ಚಾಸಾ-2 ರವರು ನೀಡಿರುತ್ತಾರೆ. ಸದರಿ ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಚಾಸಾ-2 ರವರಿಗೆ ಓದಲು ಬರುತ್ತದೆ. ಚಾಸಾ-2 ರವರು ಹೇಳಿದ ಮೇರೆಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ.

ನಿಪಿ-1 ರಲ್ಲಿ ನಮೂದಿಸಲಾಗಿರುವ ದಿನಾಂಕದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೋಲಿಸರು ನನ್ನ ಬಳಿ ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿ ಹೇಳಿಕೆಯಲ್ಲಿ ಯಾವುದೇ

ಗಲಾಟೆಯಾಗಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಂಗಡಿಯನ್ನು ನಡೆಸುವ ಸಮಯದಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದೆ. ನಾನು ನನ್ನ ಬಲಗೈ ನಿಂದ ಯಾವುದೇ ಬೊಂಡಾ, ಬಜ್ಜಿಯನ್ನು ಮಾಡಲು ಸಾಧ್ಯವಾಗುವುದಿಲ್ಲ ನಾನು ಪೋಲಿಸರ ಬಳಿ ಆರೋಪಿಯು ಕತ್ತಿ ತೆಗೆದುಕೊಂಡು ಬಂದಿರುವ ಬಗ್ಗೆ ತಿಳಿಸಿರುತ್ತೇನೆ. ಸದರಿ ಕತ್ತಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿಯು ಅಂಗಡಿಯ ಬಳಿ ಬಂದು ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆಯ ಪೂರ್ವದಲ್ಲಿ ನಾನು ಮತ್ತು ಚಾಸಾ-2 ರವರು ಬಣಕಲ್ ಪೋಲಿಸ್ ಠಾಣೆಗೆ ಭೇಟಿ ನೀಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ ಮತ್ತು ಅಲ್ಲಿ ಗಲಾಟೆ ಮಾಡುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಿಪಿ-3 ಮತ್ತು 4 ರಲ್ಲಿ ನನ್ನ ಪೆಟ್ಟಿಗೆ ಅಂಗಡಿಗೆ ಹಾನಿಯಾಗಿರುವುದು ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-3 ರಿಂದ  5 ರಲ್ಲಿ ಗುಲಾಬಿ ಬಣ್ಣದ ಅಂಗಿಯನ್ನು ಧರಿಸಿರುವುದು ಪ್ರವೀಣ ಎಂದು ಸಾಕ್ಷಿಯು ಗುರುತಿಸಿರುತ್ತಾರೆ.

ಪೋಲಿಸರು ನನ್ನ ಪೆಟ್ಟಿಗೆ ಅಂಗಡಿಗೆ ಭೇಟಿ ನೀಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ನಿಪಿ-6 ರಲ್ಲಿ ಪೆಟ್ಟಿಗೆ ಅಂಗಡಿಯ ಹಿಂಬದಿಯಲ್ಲಿ ಕಾಣುತ್ತಿರುವ ಮನೆಯು ಯಾರಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-6 ರಲ್ಲಿ ಯಾವುದೇ ವ್ಯಕ್ತಿಗಳು ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-3 ಮತ್ತು 4 ರಲ್ಲಿ ಕಂಡುಬರುತ್ತಿರುವ ವಸ್ತುಗಳು ನಿಪಿ-5 ಮತ್ತು 6 ರಲ್ಲಿ ಕಂಡುಬಾರದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ನಿಶಾನೆಗಳಲ್ಲಿ ಯಾವುದೇ ಸಿಲಿಂಡರ್ ಗ್ಯಾಸ್ ಗಳು ಕಂಡುಬಾರದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೋಲಿಸರು ನಮ್ಮ ಅಂಗಡಿಯಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಆರೋಪಿಯ ನೆಮ್ಮದಿಗೆ ಭಂಗ ಉಂಟುಮಾಡಿರುವುದಾಗಿ ನಮ್ಮ ವಿರುದ್ದ ನೀಡಿದ ದೂರಿನ ಪ್ರತಿಯಾಗಿ ನಾವು ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯದಲ್ಲಿ ಗ್ಯಾಸ್ ಹಂಡೆಯನ್ನು ನೋಡಿರುತ್ತೇನೆ. ಆರೋಪಿಯು ನನ್ನ ಅಂಗಡಿಗೆ ನುಗ್ಗಿ, ವಸ್ತುಗಳನ್ನು ಚಲ್ಲಾಪಿಲ್ಲಿ ಮಾಡಿ, ನೈಟಿಯನ್ನು ಹರಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಹಸಿರು ಬಣ್ಣದ ನೈಟಿಯನ್ನು ಧರಿಸಿರುತ್ತೇನೆ. ನಾನು ಆ ದಿನ ಧರಿಸಿದ ನೈಟಿಯನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿರುತ್ತೇನೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆ ದಿನ ಪೋಲಿಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.2200/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರಾಜಶೆಟ್ಟಿ | ಪ್ರಾಸಾ-2 |
| ತಂದೆಯ ಹೆಸರು | : ಸುಗ್ಗಾ ಶೆಟ್ಟಿ | ಚಾಸಾ-2 |
| ವಯಸ್ಸು | : 57 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 19.08.2025 |
| ವಾಸಸ್ಥಳ | : ಬಕ್ಕೀ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ರವರು ನನ್ನ ಪತ್ನಿ.

ಬಕ್ಕೀ ಗ್ರಾಮದ ರಸ್ತೆಯ ಬದಿಯಲ್ಲಿ ಪಂಚಾಯ್ತಿ ಯವರು ನೀಡಿದ ಪೆಟ್ಟಿಗೆ ಅಂಗಡಿಯನ್ನು ನಾನು ಮತ್ತು ಚಾಸಾ-1 ರವರು ಬಜ್ಜಿ ಬೊಂಡವನ್ನು ಮಾಡಿಕೊಂಡು ನಡೆಸುತ್ತಿರುತ್ತೇವೆ. ದಿ.02.08.2024 ರಂದು ಸ.5.30 ರ ಸಮಯಕ್ಕೆ ಆರೋಪಿಯು ನಮ್ಮ ಅಂಗಡಿಯ ಬಳಿ ಬಂದು ಅಂಗಡಿಯನ್ನು ಧ್ವಂಸ ಮಾಡಿರುತ್ತಾರೆ. ಸದರಿ ಹಲ್ಲೆಯಿಂದ ನನಗೆ ಸುಮಾರು ರೂ.30,000/- ಗಳಷ್ಟು ನಷ್ಟವಾಗಿರುತ್ತದೆ. ಚಾಸಾ-1 ರವರು ಅಂಗಡಿಯ ಒಳಗೆ ಇರುವ ಸಂದರ್ಭದಲ್ಲಿ ಆರೋಪಿಯು ಅವರಿಗೆ ಥಳಿಸಿ ಅಂಗಡಿಯಲ್ಲಿದ್ದ ವಸ್ತುಗಳನ್ನು ಹೊರಗೆ ಎಸೆದು ಚಾಸಾ-1 ರವರು ಧರಿಸಿದ್ದ ಬಟ್ಟೆಯನ್ನು ಹರಿದಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-1 ರವರು ಹಸಿರು ಮತ್ತು ನೀಲಿ ಬಣ್ಣದ ನೈಟಿಯನ್ನು ಧರಿಸಿರುತ್ತಾರೆ. ದಿ.02.09.2024 ರಂದು ಮ.3.35 ರ ಸಮಯಕ್ಕೆ ನಾವು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇವೆ. ದಿ.02.12.2024 ರಂದು ಪೋಲಿಸರು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-3 ಮತ್ತು 4 ರವರು ಪಂಚರಾಗಿ ಹಾಜರಿರುತ್ತಾರೆ. ನಂತರ ಇನ್ನು ಮುಂದೆ ಸದರಿ ಸ್ಥಳದಲ್ಲಿ ಅಂಗಡಿಯನ್ನು ಹಾಕದಂತೆ ಮತ್ತು ಹಾಕಿದ್ದಲ್ಲಿ ಜೆ.ಸಿ.ಬಿ ನಿಂದ ಧ್ವಂತ ಮಾಡಿಸುವುದಾಗಿ ನುಡಿದಿರುತ್ತಾರೆ. ದಿ.02.12.2024 ರಂದು ಪೋಲಿಸರು ಚಾಸಾ-1 ರವರು ಧರಿಸಿದ್ದ ನೈಟಿಯನ್ನು ಮತ್ತು ಸಿಲಿಂಡರ್ ಪೈಪ್ ನ್ನು ವಶಪಡಿಸಿಕೊಂಡಿರುತ್ತಾರೆ.

ಆರೋಪಿಯ ಹಿಂಸೆಯನ್ನು ತಡೆಯಲಾರದ ನಂತರದ ದಿನಗಳಲ್ಲಿ ನಾನು ಅಂಗಡಿಯನ್ನು ಖಾಲಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆರೋಪಿಯು ದಿ.08.02.2024 ರಂದು ಆರೋಪಿಯು ನಮ್ಮ ಒಟ್ಟಿಗೆ ಗಲಾಟೆಯನ್ನು ಮಾಡಿರುತ್ತಾರೆ ಎಂದರೆ ಸರಿ. ದಿ.09.02.2024 ರಂದು ನಾವು ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ದಿ.12.02.2024 ರಂದು ಸ.5.00 ರಿಂದ 6.00 ರವರೆಗೆ ಪೋಲಿಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿ. ದಿ.08.02.2024 ರಂದು ಆರೋಪಿಯು ಚಾಸಾ-1 ರವರನ್ನು ಅಂಗಡಿಯಿಂದ ಹೊರಗೆ ಎಳೆದು ಅವರ ಧರಿಸಿದ್ದ ನೈಟಿಯನ್ನು ಎಳೆದಾಡಿರುತ್ತಾರೆ ಎಂದರೆ ಸರಿ. ನನಗೂ ಮತ್ತು ಚಾಸಾ-1 ರವರಿಗೆ ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ ಮತ್ತು ನಮ್ಮ ಅಂಗಡಿಯಎಲ್ಲಿ ಇದ್ದ ಸಿಲಿಂಡರ್ ಪೈಪ್ ನ್ನು ಕಿತ್ತು ಎಸೆದಿರುತ್ತಾರೆ. ಮತ್ತು ನಾವು ಅಂಗಡಿಯನ್ನು ಖಾಲಿ ಮಾಡದಿದ್ದಲ್ಲಿ ಜೆ.ಸಿ.ಬಿ ಯಿಂದ ಅಂಗಡಿಯನ್ನು ಧ್ವಂಸ ಮಾಡಿ, ನಮ್ಮ ಕೈ ಕಾಲುಗಳನ್ನು ಮುರಿಸುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ.ಡಿ.ಎಸ್ ವಕೀಲರಿಂದಃ**

ನಾವು ಕಳೆದ 20 ವರ್ಷಗಳಿಂದ ಪೆಟ್ಟಿಗೆ ಅಂಗಡಿಯನ್ನು ನಡೆಸುತ್ತಿರುತ್ತೇವೆ. ಸದರಿ ಅಂಗಡಿಯನ್ನು ನಡೆಸಲು ಯಾವುದೇ ಪರವಾನಿಗೆ ಇರುವುದಿಲ್ಲ. ನಾವು ಪರವಾನಿಗೆಯನ್ನು ಕೋರಿ ಪಂಚಾಯ್ತಿಗೆ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಸದರಿ ಅರ್ಜಿಯ ಪ್ರತಿಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ಅಂದಾಜು 2018 ರಲ್ಲಿ ನಮಗೆ ಪಂಚಾಯ್ತಿಯವರು ಪೆಟ್ಟಿಗೆ ಅಂಗಡಿಯನ್ನು ನೀಡಿರಬಹುದು. ಸದರಿ ಸಮಯದಲ್ಲಿ ನಾವು ಪೆಟ್ಟಿಗೆಯನ್ನು ನಮ್ಮ ಮನೆಯಲ್ಲಿ ಇಟ್ಟಿದ್ದೆವು. ನಾನು ಈ ದಿನ ನ್ಯಾಯಾಲಯದಲ್ಲಿ ಸಿಲಿಂಡರ್ ಅಂಡೆಯನ್ನು ನೋಡಿರುವುದಿಲ್ಲ ಸಾಕ್ಷಿಯು ಮುಂದುವರೆದು ಪೋಲಿಸರು ಕೇವಲ ಬಟ್ಟೆ ಮತ್ತು ಸಿಲಿಂಡರ್ ಪೈಪ್ ನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿರುವ ಸಿಲಿಂಡರ್ ಪೈಪ್ ನಾನು ಖರೀದಿಸಿದ ಸಮಯದಲ್ಲೂ ಅಷ್ಟೇ ಅಳತೆ ಇರುತ್ತದೆ. ಸದರಿ ಪೈಪಿನ ಮೇಲೆ ಕಂಡುಬರುತ್ತಿರುವ ಗುರುತು ಕತ್ತಿಯಿಂದ ಮಾಡಲಾಗಿರುತ್ತದೆ. ಸದರಿ ಪೈಪ್ ನ್ನು ಯಾವುದರಿಂದ ಕತ್ತರಿಸಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಪೈಪ್ ನ್ನು ಹಲ್ಲಿನ ಮುಖಾಂತರ ಕತ್ತರಿಸಲು ಸಾಧ್ಯವಿಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ.

ಸದರಿ ಮಹಜರ್ ಕಾಲದಲ್ಲಿ ಪೋಲಿಸರು, ಚಾಸಾ-3 ಮತ್ತು 4 ರವರು ಹಾಜರಿದ್ದರು. ಸದರಿ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ನಿಪಿ-3, 4 ಮತ್ತು 5 ರಲ್ಲಿ ಕಂಡುಬರುತ್ತಿರುವ ವ್ಯಕ್ತಿಯ ಹೆಸರು ಸಂದೀಪ್ ಎಂದರೆ ಸರಿ ಮತ್ತು ಸದರಿ ಎರಡೂ ನಿಶಾನೆಯಲ್ಲೂ ಸಾಕ್ಷಿಯಾದ ಕುಮಾರ್ ರವರು ಇರುತ್ತಾರೆ. ಸದರಿ ನಿಶಾನೆಯಲ್ಲಿ ನಾನು ಕಂಡುಬರುತ್ತಿಲ್ಲ ಎಂದರೆ ಸರಿ. ಪೋಲಿಸರು ಮಹಜರ್ ಗೆ ಬಂದ ಕಾಲದಲ್ಲಿ ನಮ್ಮ ಅಂಗಡಿಗೆ ಯಾವುದೇ ಹಾನಿಯಾಗಿರುವುದಿಲ್ಲ.

ನಿಪಿ-3 ರಿಂದ 6 ರ ಫೋಟೋಗಳನ್ನು ಪೋಲಿಸರು ತೆಗೆದಿರುವುದಿಲ್ಲ. ನಿಪಿ-6 ರಲ್ಲಿ ಸಿಲಿಂಡರ್ ಪೈಪ್ ಮತ್ತು ಹಂಡೆ ಕಂಡುಬರುತ್ತಿಲ್ಲ ಎಂದರೆ ಸರಿ. ಸದರಿ ನಿಶಾನೆಯಲ್ಲಿ ಅಂಗಡಿಯಲ್ಲಿ ಯಾವುದೇ ತಿಂಡಿ ತಿನಿಸುಗಳು ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಅವುಗಳು ಕೆಳಗೆ ಚೆಲ್ಲಾಪಿಲ್ಲಿಯಾಗಿರುತ್ತವೆ ಎಂದು ನುಡಿಯುತ್ತಾರೆ. ನಿಪಿ-3, 4 ಮತ್ತು 6 ರಲ್ಲಿ ಪೆಟ್ಟಿಗೆ ಅಂಗಡಿಯ ಹಿಂದೆ ಕಂಡುಬರುತ್ತಿರುವ ಮನೆ ಮತ್ತು ಕಾಫೀ ತೋಟ ಆರೋಪಿಗೆ ಸೇರಿದ್ದಾಗಿರುತ್ತದೆ. ಪೆಟ್ಟಿಗೆ ಅಂಗಡಿಯಿಂದ ನಮ್ಮ ಮನೆಗೆ 1 ಕಿ.ಮೀ ಅಂತರವಿದೆ. ನಮ್ಮ ಮನೆ ರಸ್ತೆ ಬದಿಯಲ್ಲಿಯೇ ಇರುತ್ತದೆ. ನಿಪಿ-3 ರಿಂದ 6 ರಲ್ಲಿ ಯಾವುದೇ ಬಸ್ ನಿಲ್ದಾಣ ಕಂಡುಬರುತ್ತಿಲ್ಲ ಎಂದರೆ ಸರಿ.

ಬಕ್ಕೀ ಇಂದ ಬೆಟ್ಟಗೆರೆಗೆ ಇರುವ ರಸ್ತೆಯಲ್ಲಿ ಯಾವುದೇ ಬಸ್ ಸಂಚಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿಯಿಂದ ಆರೋಪಿಗೆ ತೊಂದರೆಯಾಗುತ್ತಿರುವ ಕುರಿತು ಅವರು ನಮ್ಮಗಳ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಾನು ಪೋಲಿಸ್ ಠಾಣೆಯಲ್ಲಿ ಪೆಟ್ಟಿಗೆಯನ್ನು ತೆರವುಗೊಳಿಸುವ ಕುರಿತು ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಯಲ್ಲಿ ನಾನು ಮತ್ತು ಚಾಸಾ-1 ರವರು ಬೊಂಡ, ಬಜ್ಜಿಯನ್ನು ತಯಾರಿಸುತ್ತಿದ್ದೆವು. ನನ್ನ ಹೆಂಡತಿಗೆ 2002 ನೇ ಸಾಲಿನಲ್ಲಿ ಸ್ಟ್ರೋಕ್ ಆಗಿರುತ್ತದೆ. ಚಾಸಾ-1 ರವರ ಬಲಗೈ ನಿಂದ ಯಾವುದೇ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಎಂದರೆ ಸರಿ. ನಾವು 1989 ನೇ ಸಾಲಿನಲ್ಲಿ ವಿವಾಹ ವಾಗಿರುತ್ತೇವೆ. ನನಗೆ ಈಗ 57 ವರ್ಷ. ನನಗೆ 1989 ರಲ್ಲಿ ನನಗೆ 21 ವರ್ಷ ಆಗಿರಬಹುದು. ನನಗೆ ಇಬ್ಬರು ಮಕ್ಕಳು. ಬಕ್ಕೀ ಗ್ರಾಮದಲ್ಲಿ ನಮಗೆ ವಾಸದ ಮನೆ ಇರುವ ಕುರಿತು ಪೋಲಿಸರಿಗೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ಬಕ್ಕೀ ಗ್ರಾಮದಿಂದ ಬಣಕಲ್ ಪೋಲಿಸ್ ಠಾಣೆಗೆ ಸುಮಾರು 10 ಕೀ.ಮೀ ಅಂತರವಿರುತ್ತದೆ. ನನ್ನ ಬಳಿ ಮಾತ್ರ ಮೊಬೈಲ್ ಫೋನ್ ಇರುತ್ತದೆ.

ಗಲಾಟೆಯಾದ ಸಂದರ್ಭದಲ್ಲಿ ಪೋಲಿಸರಿಗೆ ದೂರವಾಣಿ ಮುಖಾಂತರ ಮಾಹಿತಿ ನೀಡಲು ತೊಂದರೆ ಇರಲಿಲ್ಲ. ದೂರು ನೀಡಲು ನಾನು ಠಾಣೆಗೆ ಹೋಗಿರುತ್ತೇನೆ. ದೂರನ್ನು ನಾನು, ನಮ್ಮ ಗ್ರಾಮಸ್ಥರುಗಳಾದ ಅಕ್ಷತ್, ಗೋಪಾಲ್, ಕಿರಣ್, ನನ್ನ ಮಗನಾದ ರತೀಶ್, ಚಾಸಾ-1 ಮತ್ತು ರವರುಗಳು ಇತರರೊಂದಿಗೆ ಹೋಗಿರುತ್ತೇವೆ. ಆ ದಿನ ನನಗೆ ರೂ.30,000/- ನಷ್ಟವಾಗಿರುವ ಬಾಬ್ತು ರೂ.15,000/- ನಗದು ಮತ್ತು ತಿಂಡಿ ತಿನಿಸುಗಳು ಇದ್ದವು. ಸದರಿ ತಿಂಡಿ ತಿನಿಸುಗಳನ್ನು ನಾವು ಮೂಡಿಗೆರೆಯ ಅಬ್ಬುಸಾಲೆಯಲ್ಲಿ ಖರೀದಿಸಿರುತ್ತೇವೆ. ಸದರಿ ಬಾಬ್ತು ಯಾವುದೇ ರಶೀದಿಯನ್ನು ನೀಡಿರುವುದಿಲ್ಲ. ದೂರನ್ನು ನಾವು ಬಣಕಲ್ ನಲ್ಲಿಯೇ ಟೈಪ್ ಮಾಡಿಸಿರುತ್ತೇವೆ. ಸದರಿ ದೂರಿನಲ್ಲಿ ಘಟನೆ ನಡೆದ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯೂ ದಿ.02.08.2024 ರಂದು ನಡೆದಿರುತ್ತದೆ. ನಿಪಿ-1 ರಲ್ಲಿ ನಮೂದಿಸಿರುವ ದಿನಾಂಕವನ್ನು ತಿದ್ದುಪಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಹಿಂಬರಹವನ್ನು ಯಾರು ಬರೆದಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ದಾಖಲಾತಿಯನ್ನು ತಿದ್ದುಪಡಿ ಮಾಡಿದ್ದಲ್ಲಿ ನಾವು ಅವಿದ್ಯಾವಂತರಾದ ಕಾರಣ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ.

ನಾವು ನಮ್ಮ ದೂರಿನಲ್ಲಿ ತಿಳಿಸಿರುವಂತೆ ಆರೋಪಿಯು ಹಲ್ಲೆಗೆ ಬಳಸಿದ್ದ ಕತ್ತಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿರುವುದಿಲ್ಲ. ಪ್ರವೀಣ ಯಾರು ಎಂದು ನನಗೆ ತಿಳಿದಿರುವುದಿಲ್ಲ. ನಾವುಗಳ ಅನಧಿಕೃತವಾಗಿ ಪೆಟ್ಟಿಗೆ ಅಂಗಡಿಯನ್ನಿಟ್ಟು ಆರೋಪಿಗೆ ತೊಂದರೆಯುಂಟು ಮಾಡಿದ ಬಾಬ್ತು ಅವರು ದೂರು ನೀಡಿದ ಮೇರೆಗೆ ನಾವು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಕಂಡುಬರುತ್ತಿರುವ ಮದ್ಯದ ಪ್ಯಾಕೇಟ್‌ಗಳನ್ನು ಯಾರೋ ಎಸೆದಿರಬಹುದು, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ನಾನು ಪೆಟ್ಟಿಗೆ ಅಂಗಡಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಯಾವುದೇ ಪ್ರಕರಣ ಚಾಲ್ತಿಯಲ್ಲಿರುವುದಿಲ್ಲ. ನನಗೆ ಯಾವುದೇ ವಿಷಯ ತಿಳಿಯದಿದ್ದರೂ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಕಂಡುಬರುತ್ತಿರುವ ನೈಟಿ ಮತ್ತು ಸಿಲಿಂಡರ್ ಪೈಪ್ ಗೂ ಈ ಪ್ರಕರಣಕ್ಕೂ ಯಾವುದೇ ಸಂಭಂದವಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ವಸ್ತುಗಳು ನನಗೂ ಮತ್ತು ಚಾಸಾ-1 ರವರಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಸ್ತುಗಳು ನಮ್ಮದೇ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸಾಕ್ಷಿಯು ನಾವೇ ಸದರಿ ವಸ್ತುಗಳನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-1 ಅಂಗವಿಕಲೆ ಎಂಬ ಬಾಬ್ತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.